ಮೂಲ ದಾವಾ ಸಂಖ್ಯೆ 10/2021

ಡಿ ಡಬ್ಲ್ಯೂ-1

**(ದಿನಾಂಕ 20.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ A.C.C. ವಕೀಲರಿಂದಃ-**

ನಾನು ಎಸ್ ಎಸ್ ಎಲ್ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದ ಪತ್ರದ ವಿಚಾರ ಓದಿ ತಿಳಿದುಕೊಂಡಿರುತ್ತೇನೆ. ವಾದಿಯರ ಕುಟುಂಬದ ವಂಶಾವಳಿ ನೋಡಿರುವುದಿಲ್ಲಾ. ನಿ ಪಿ 1 ಈಶ್ವರಪ್ಪ ರಾಮಚಂದ್ರಪ್ಪ ರವರ ವಾರಸುದಾರರನ್ನು ನಾನು ನೋಡಿರುವುದಿಲ್ಲಾ. 3 ನೇ ಪ್ರತಿವಾದಿ ಬಿ ಎಸ್ ವಿಜಯ ನನ್ನ ಪತ್ನಿ. ಅವರಿಂದ ಸಾಕ್ಷಿ ನುಡಿಯಲು ನಾನು ಅಧಿಕಾರ ಪತ್ರ ಪಡೆದಿರುವುದಿಲ್ಲಾ ಎಂದರೆ ಸರಿ. 3 ನೇ ಪ್ರತಿವಾದಿಯ ಪರ ಕೂಡ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಅಂತಾ ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲಾ ಎಂದರೆ ಸರಿಯಲ್ಲ. ನಾನು ಖರೀದಿಸಿದ ಆಸ್ತಿಗಳು ವಾದಿಯ ಮನೆತನಕ್ಕೆ ಹೇಗೆ ಬಂತು ಅಂತಾ ನಾನು ದಾಖಲೆ ಪರಿಶೀಲಿಸಿರುವುದಿಲ್ಲಾ. ದಾವಾ ಆಸ್ತಿಗಳು ಎಲ್ಲಾ ಈಶ್ವರಪ್ಪ ಮತ್ತು ಗಣೇಶಪ್ಪ ಸಾಮೂಹಿಕ ದುಡಿಮೆಯಿಂದ ಆಸ್ತಿ ಖರೀದಿಸಿದ್ದರು ಎಂದರೆ ಸರಿ. ಸರ್ವೆ ನಂಬರ 31 ಎ ಐಟಂ ನಂಬರ 1 ನ್ನು ಖರೀದಿಸುವ ಪೂರ್ವದಲ್ಲಿ ಕ್ರಯಕರಾರು ಪತ್ರ ಮಾಡಿಕೊಂಡಿದ್ದೆ. ಆ ಸಂಧರ್ಭದಲ್ಲಿ ಆಸ್ತಿಗೆ 1 ಎಕರೆಗೆ 15-20 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ಕಮಲಮ್ಮ ನಾಗರಾಜ ಹನುಮಪ್ಪ ಮಾತ್ರ ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಕರಾರುಪತ್ರದಲ್ಲಿ ನಿ ಡಿ 47 ರ ಪ್ರಕಾರ ನಾಗರಾಜಪ್ಪನ ಸಹಿ ಇದೆ ಎಂದರೆ ಸರಿ. ಖರೀದಿ ಕರಾರು ಪತ್ರ ಮಾಡಿಸುವ ಪೂರ್ವದಲ್ಲಿ ಪತ್ರಿಕಾ ಪ್ರಕಟಣೆ ತೆಗೆದುಕೊಂಡಿರುವುದಿಲ್ಲಾ ಎಂದರೆ ಸರಿ. ಗಣೇಶಪ್ಪ ಮತ್ತು ಈಶ್ವರಪ್ಪನಿಗೆ ಬೇರೆ ವಾರಸುದಾರರು ಇದ್ದಾರೋ ಇಲ್ಲವೋ ಅಂತಾ ವಿಚಾರಣೆ ಮಾಡಿರುತ್ತೇನೆ. ಹೆಣ್ಣು ಮಕ್ಕಳು ವಿವಾಹ ಆಗಿ ಹೋಗಿರುವುದಾಗಿ ಗೊತ್ತಾಗಿರುತ್ತದೆ. ಹೆಣ್ಣು ಮಕ್ಕಳು ಎಲ್ಲಿ ಎಲ್ಲಿ ವಿವಾಹ

ಆಗಿರುತ್ತಾರೆ ಅಂತಾ ವಿಚಾರಣೆ ಮಾಡಿರುವುದಿಲ್ಲಾ. ಗಣೇಶಪ್ಪನಿಗೆ 5 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ 5 ಜನ ಹೆಣ್ಣು ಮಕ್ಕಳ ಸಮ್ಮತಿ ಪಡೆಯಲು ನಾನು ಪ್ರಯತ್ನ ಮಾಡಿಲ್ಲಾ ಎಂದರೆ ಅವರಿಗೆ ಹಕ್ಕು ಇಲ್ಲಾ ಅಂತಾ ತಿಳಿಸಿರುತ್ತಾರೆ. ಹೆಣ್ಣು ಮಕ್ಕಳಿಗೆ ನಾನು ಯಾವುದೇ ನೋಟೀಸು ಕೊಟ್ಟಿರುವುದಿಲ್ಲಾ. ಹೆಣ್ಣು ಮಕ್ಕಳಿಗೆ ನಾನು ಆಸ್ತಿ ಖರೀದಿಸುತ್ತಿರುವ ಬಗ್ಗೆ ಮಾಹಿತಿ ಬಂದಿರುವುದಿಲ್ಲಾ ಎಂದರೆ ಸರಿಯಲ್ಲ. ಯಾವ ರೀತಿ ಮಾಹಿತಿ ಇತ್ತು ಅಂತಾ ನಾನು ವಿಚಾರ ಮಾಡಿರುವುದಿಲ್ಲಾ. ನಿ ಡಿ 2 ರಂತೆ ನಾನು 7,62,000/- ರೂ ಗಳ ಮೇಲೆ ನಾನು ನೋಂದಣಿ ಶುಲ್ಕ ಪಾವತಿ ಮಾಡಿರುತ್ತೇನೆ ಎಂದರೆ ಸರಿ. ಕ್ರಯಪತ್ರದಲ್ಲಿ 7,62,000/- ರೂ ಬೆಲೆ ನಿಗದಿ ಆಗಿದೆ ಎಂದರೆ ಸರಿ. ನಿ ಡಿ 2 ರಲ್ಲಿ ನಾನು ಕೇವಲ 1,20,000/- ರೂ ಪಾವತಿ ಮಾಡಿರುತ್ತೇನೆ ಎಂದರೆ ಸರಿ. ಆ ದಿನದ ಬೆಲೆ ಅಷ್ಟು ಇತ್ತು. ವಾದಿಯರ ಆಸ್ತಿಯನ್ನು ಮೊಟಕುಗೊಳಿಸಲು ಖೊಟ್ಟಿಯಾಗಿ ಕ್ರಯ ಕರಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಓ ಎಸ್ ನಂಬರ 148/2009 ದಾವಾ ಕಿರಿಯ ದಿವಾಣಿ ನ್ಯಾಯಾಲಯದಲ್ಲಿ Specific performance ಕೋರಿ ಹೂಡಿರುತ್ತೇನೆ ಎಂದರೆ ಸರಿ. ಸದರಿ ಕೇಸ್ ನಲ್ಲಿ ನಾಗಪ್ಪ ಗಣೇಶಪ್ಪ ರಾಮಚಂದ್ರಪ್ಪ ತಿಮ್ಮಪ್ಪ ಎಲ್ಲರನ್ನು ಏಕ ತರ್ಫಿಯನ್ನಾಗಿಸಿ ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದೇಶ ಆದ ನಂತರ ಅಮಲ್ಜಾರಿ ಅರ್ಜಿ ಸಲ್ಲಿಸಿರುವತ್ತೇನೆ ಎಂದರೆ ಸರಿ. ನ್ಯಾಯಾಲಯದ ಕಮೀಷನರ ರವರನ್ನು ನೇಮಕ ಮಾಡಿಸಿಕೊಂಡಿದ್ದೆ ಎಂದರೆ ಸರಿ. 2014 ರಲ್ಲಿ ನಾನು ನ್ಯಾಯಾಲಯದ ಮುಖಾಂತರ ಐಟಂ ನಂಬರ 1 ನ್ನು ಖರೀದಿಸಿರುತ್ತೇನೆ ಎಂದರೆ ಸರಿ. ನ್ಯಾಯಾಲಯದಲ್ಲಿ ಈ ಪ್ರಕರಣ ಬಾಕಿ ಇದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಕಮಲಮ್ಮನಿಗೆ ಮನೆತನದಲ್ಲಿ ಬಹಳಷ್ಟು ಸಾಲ ಇರುತ್ತದೆ ಅಂತಾ ತಿಳಿಸಿರುತ್ತಾರೆ ನಾನು ದಾಖಲೆ ನೋಡಿರುವುದಿಲ್ಲಾ. ಸಾಲದ

ಬಗ್ಗೆ ದಾಖಲೆ ಕೊಡುವಂತೆ ನಾನು ಕೇಳಿರುವುದಿಲ್ಲಾ. ದಾವಾದ ಎಲ್ಲಾ ಐಟಂ ಆಸ್ತಿಗಳಲ್ಲಿ ಈಶ್ವರಪ್ಪ ಮತ್ತು ಗಣೇಶಪ್ಪನ ಹೆಸರು ದಾಖಲಾಗಿತ್ತು ಎಂರದೆ ನಾನು ನೋಡಿರುವುದಿಲ್ಲಾ. ನಾನು ಆಸ್ತಿ ಖರೀದಿಸುವ ಕಾಲಕ್ಕೆ ಪಹಣಿ ನೋಡಿದಾಗ ಅದರಲ್ಲಿ ಗಣೇಶಪ್ಪ ಮತ್ತು ಈಶ್ವರಪ್ಪನ ಹೆಸರು ಇರಲಿಲ್ಲ. ಕಮಲಮ್ಮನ ಹೆಸರು ಇತ್ತು. ಕಮಲಮ್ಮನ ಹೆಸರಿಗೆ ಯಾವ ರೀತಿ ಆಯಿತು ಅಂತಾ ದಾಖಲೆ ಪರಿಶೀಲನೆ ಮಾಡಿರುವುದಿಲ್ಲಾ. ಎಂ ಆರ್ ನಂಬರ 33/2004-05 ಪ್ರಕಾರ ಈಶ್ವರಪ್ಪನಿಂದ ಕಮಲಮ್ಮನಿಗೆ ನಿ ಪಿ 34 ರಂತೆ ದಾಖಲೆ ಆಗಿರುವ ಬಗ್ಗೆ ನಾನು ನೋಡಿರುವುದಿಲ್ಲಾ. ನಾನು ನಿ ಪಿ 34 ನೋಡಿದ್ದರೂ ಸಹ ನೋಡಿರುವುದಿಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲು ಗಣೇಶಪ್ಪ ತೀರಿಕೊಂಡ, ಈಶ್ವರಪ್ಪ ನಂತರ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲಾ. ಗಣೇಶಪ್ಪನ ಮರಣ ನಂತರ ಈಶ್ವರಪ್ಪನ ಹೆಸರಿಗೆ ದಾಖಲೆ ಬಂತು ಎಂದರೆ ನನಗೆ ಗೊತ್ತಿಲ್ಲಾ. ಡಿ ನಾಗರಾಜನ ಹೆಸರಿಗೆ ಹೇಗೆ ಬಂತು ಎಂದರೆ ಅದು ಸ್ವಯಾರ್ಜಿತ ಆಸ್ತಿ. ನಾಗರಾಜನಿಗೆ ಆಸ್ತಿ ಹೇಗೆ ಬಂತು ಅಂತಾ ದಾಖಲೆ ಪರಿಶೀಲನೆ ಮಾಡಿರುವುದಿಲ್ಲಾ. ನಿ ಡಿ 1 ರಂತೆ ಐಟಂ ನಂಬರ 5 ಆಸ್ತಿಯನ್ನು ನನ್ನ ಹೆಂಡತಿ ಖರೀದಿ ಮಾಡಿರುತ್ತಾರೆ. ದಿನಾಂಕ 16.06.2009 ರಂದು ನಿ ಡಿ 1 ಖರೀದಿ ಪತ್ರ ಆಗಿರುತ್ತದೆ. ದಿನಾಂಕ 04.07.2009 ರಂದು ನೋಂದಣಿ ಆಗಿದೆ ಎಂದರೆ ಸರಿ. ನಿ ಡಿ 1 ರ ಪೂರ್ವದಲ್ಲಿ ಕ್ರಯಕರಾರು ಪತ್ರ ಆಗಿರಲಿಲ್ಲ. ನಾಗರಾಜ ರೆಡ್ಡಿ ರಾಜಶೇಖರ ಸ್ವಾಮಿ, ಕಡತಿ ಮಂಜಪ್ಪ ಮತ್ತು ಇತರರು ಮಾತುಕತೆಯಲ್ಲಿ ಭಾಗವಹಿಸಿರುತ್ತಾರೆ. ಸದರಿ ಆಸ್ತಿಗೆ ಆ ಕಾಲಕ್ಕೆ 20 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ಮಾತುಕತೆ ಹಳ್ಳಿ ಕೇರೆಯಲ್ಲಿ ಆಗಿರುತ್ತದೆ. ನಿ ಡಿ 1 ಆಗುವ ಪೂರ್ವದಲ್ಲಿ ನಾವು ವಾದಿಯರಿಗೆ ಮಾಹಿತಿ ಕೊಟ್ಟಿರುವುದಿಲ್ಲಾ ಎಂದರೆ ಸರಿ. ಸದರಿ ಆಸ್ತಿ ಮೊದಲು ಗಣೇಶಪ್ಪ ತಂದೆ

ರಾಮಚಂದ್ರಪ್ಪ ಅವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲಾ. ಸದರಿಯವರ ಹೆಸರಿಗೆ ಆಸ್ತಿ ಹೇಗೆ ಬಂತು ಅಂತಾ ದಾಖಲೆ ಪರಿಶೀಲನೆ ಮಾಡಿರುವುದಿಲ್ಲಾ. ಪ್ರತಿವಾದ ಪತ್ರದಲ್ಲಿ ಸಾಕ್ಷಿ ಪ್ರಮಾಣ ಪತ್ರದಲ್ಲಿ 3 ನೇ ಪ್ಯಾರದಲ್ಲಿ ಸರ್ವೆ ನಂಬರ 168 ಪಿ ನಾಗರಾಜನ ಸ್ವಯಾರ್ಜಿತ ಆಸ್ತಿ ಅಂತ ಬರೆಸಿರುತ್ತೇನೆ ಎಂದರೆ ಸರಿ. ಸರ್ವೆ ನಂಬರ 168 ಪಿ ನಾಗರಾಜನ ಸ್ವಯಾರ್ಜಿತ ಆಸ್ತಿ ಅಂತಾ ಪಹಣಿ ಪತ್ರಿಕೆ ನೋಡಿ ಬರೆಸಿರುತ್ತೇನೆ. ಬೇರೆ ದಾಖಲೆ ನೋಡಿರುವುದಿಲ್ಲಾ. ವಾದಿಯರ ಹಕ್ಕು ನಷ್ಟಗೊಳಿಸಲು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 168 ಪಿ ನಾಗರಾಜನ ಸ್ವಯಾರ್ಜಿತ ಆಸ್ತಿ ಅಂತಾ ಸುಳ್ಳು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ ಡಿ 10 ರಂತೆ ಗಣೇಶಪ್ಪ ಆಸ್ತಿಯ ಮಾಲೀಕ ಅಂತಾ ನಮೂದು ಇದೆ ಎಂದರೆ ಸರಿ. ನಿ ಡಿ 11 ರಲ್ಲಿ ನಾಗರಾಜನ ಹೆಸರು ಯಾವ ಆಧಾರದ ಮೇಲೆ ಬಂದಿದೆ ಅಂತಾ ದಾಖಲೆಗಳನ್ನು ಪರೀಲಿಸಿರುವುದಿಲ್ಲಾ. ಸರ್ವೆ ನಂಬರ 31 ಎ, 168 ಇ 315/ಎ 2 ಆಸ್ತಿಗಳನ್ನು ನಾನು ಮತ್ತು ನನ್ನ ಹೆಂಡತಿ ಖರೀದಿ ಮಾಡಿದ್ದು ಖರೀದಿ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಗಳ ಆಧಾರದ ಮೇಲೆ ಮೊಟ್ಟ ಮೊದಲ ಬಾರಿಗೆ 2005 ರಲ್ಲಿ ನನ್ನ ಹೆಸರು ದಾಖಲಾಗಿದೆ. ನನ್ನ ಹೆಂಡತಿ ಹೆಸರು 2010 ರಲ್ಲಿ ನಮೂದು ಆಗಿರುತ್ತದೆ. ನಾನು ಮತ್ತು ನನ್ನ ಹೆಂಡತಿ ಖರೀದಿಸಿದ ಆಸ್ತಿಗಳ ಕುರಿತಂತೆ ತಹಶೀಲ್ದಾರ ನ್ಯಾಯಾಲಯದಲ್ಲಿ ಪ್ರಕರಣಗಳು ನಡೆದವು ಎಂದರೆ ಸರಿ. ಅಲ್ಲಿ ವಾದಿಯರು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನಂತೆ ಆದೇಶ ಆಗಿರುತ್ತದೆ. ನನ್ನ ಹೆಸರು ದಾಖಲಿಸುವಂತೆ ಆದೇಶ ಆಗಿರುತ್ತದೆ. ಸದರಿ ಆದೇಶದ ಪ್ರತಿಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲಾ. ತಹಶೀಲ್ದಾರ

ರವರ ನ್ಯಾಯಾಲಯದಲ್ಲಿ ವಾದಿಯರಿಗೆ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ಅಲ್ಲಿಯವರೆಗೆ ವಾದಿಯರಿಗೆ ಖರೀದಿ ಪತ್ರಗಳ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಈಶ್ವರಪ್ಪನಿಗೆ ಯವುದೇ ವಾರಸುದಾರರು ಇರಲಿಲ್ಲ ಎಂದರೆ ನನಗೆ ಮಾಹಿತಿ ಇರುವುದಿಲ್ಲಾ. ಗಣೇಶಪ್ಪ ಪೋತಿ ಆದ ನಂತರ ಕಮಲಮ್ಮ ತಾನು ಒಬ್ಬಳೇ ವಾರಸುದಾರರು ಅಂತಾ ನನ್ನ ಚಿತಾವಣೆ ಮೇರೆಗೆ ಹೆಸರು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತಹಶೀಲ್ದಾರ ಕಚೇರಿಯಲ್ಲಿ ಆದೇಶ ಆದ ನಂತರ ಓ ಎಸ್ ನಂಬರ 148/2009 ರಲ್ಲಿ ವಾದಿಯರನ್ನು ನಾನು ಪಕ್ಷಗಾರರನ್ನಾಗಿ ಮಾಡಬಹುದಾಗಿತ್ತು ಎಂದರೆ ಮಾಡಿರುವುದಿಲ್ಲಾ. ವಾದಿಯರಿಗೆ ಹಕ್ಕು ದಕ್ಕಬಾರದು ಅಂತಾ ಅವರಿಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ.

**(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.